ಸರ್ಕಾರವು 25,000 ರೂ.ಗಳ ಪ್ಯಾಕೇಜ್ ಕೊಡಬೇಕು. ಮೊದಲನೇ ಕಂತಾಗಿ 25,000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ರೈತ ಬೆಳೆಗೆ ಔಷಧಿ ಸಿಂಪರಣೆ ಮಾಡಿ ಬೆಳೆಯನ್ನು ಉಳಿಸಿಕೊಳ್ಳಬೇಕಾಗಿತ್ತು. ಆದರೆ, ಬೆಳೆ ಇಲ್ಲದೆ ಪರಿಹಾರ ಕೊಟ್ಟಲ್ಲಿ, ನಾಳೆ ದಿವಸ ಇದು ಆಗಬಾರದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಉಳಿದ ಬೆಳೆಯನ್ನು ಅವತ್ತಿನ ದಿವಸ ಯಾರು ಕಿತ್ತು ಹಾಕಿಲ್ಲವೋ ರೋಗವನ್ನು ನಿಯಂತ್ರಿಸಿದ್ದಾರೋ, ಅಂತಹ ಬೆಳೆಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಪರಿಹಾರ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶಿರಾ ಕ್ಷೇತ್ರದಲ್ಲಿ ಶೇಂಗಾ ಬೆಳೆ ನಷ್ಟದ ಬಗ್ಗೆ

59(323) ಶ್ರೀ ಜಯಚಂದ್ರ ಟಿ.ಬಿ.(ಶಿರಾ)
ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು)

ಅ) ಶಿರಾ ತಾಲ್ಲೂಕಿನಲ್ಲಿ ಶೇಂಗಾ ಬೆಳೆ ನಷ್ಟದ ಬಗ್ಗೆ ನೆರೆ ರಾಜ್ಯವಾದ ಆಂಧ್ರಪ್ರದೇಶದ ಮಾದರಿಯಲ್ಲಿ ಪರಿಹಾರ ನೀಡುವಂತೆ ಅಂದಿನ ಸರ್ಕಾರವನ್ನು ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ ಶೇಂಗಾ ಬೆಳೆಯ ನಷ್ಟದ ಪ್ರಮಾಣ ಮತ್ತು ಅಂದಾಜು ಬೆಲೆ ಎಷ್ಟು?

ಶಿರಾ ತಾಲ್ಲೂಕಿನಲ್ಲಿ 46940 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆಗೆ ಹಾನಿಯಾಗಿರುತ್ತದೆ ಹಾಗೂ ಉತ್ಪಾದನೆಯಲ್ಲಿ ಸುಮಾರು 23704 ಟನ್ ನಷ್ಟ ವಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರ ಅಂದಾಜು ಬೆಲೆ ಮೊತ್ತ ರೂ.52.15 ಕೋಟಿ ಆಗುತ್ತದೆ.

ಇ) ಸರ್ಕಾರ ನಷ್ಟದಿಂದ ಕಂಗೆಟ್ಟಿರುವ ಅಸಹಾಯಕ ರೈತರ ನೆರವಿಗೆ ಮುಂದಾಗುವುದೇ?

ಸದರಿ ರೈತರು ಬೆಳೆ ವಿಮಾ ಯೋಜನೆ ಅಡಿಯಲ್ಲಿ ಪ್ರೀಮಿಯಂ ಪಾವತಿಸುವ ಮೂಲಕ ಭಾಗವಹಿಸಿದ್ದರೆ, ಸದರಿ ಯೋಜನೆಯಡಿಯಲ್ಲಿ ನಿಯಮಾನುಸಾರ ಪರಿಹಾರವನ್ನು ಪಡೆಯಬಹುದಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ "ಹೌದು" ಎಂದು ಒಪ್ಪಿಕೊಂಡಿದ್ದೀರಿ. ಕೊನೆಯ ಪ್ರಶ್ನೆಗೆ, ಸಲಹೆ ಕೊಡುತ್ತಿದ್ದೀರಿ. ನಾನು ನಿಮ್ಮ ಸಲಹೆ, ಉಪದೇಶ ಕೇಳುವುದಕ್ಕಲ್ಲ ಪ್ರಶ್ನೆ ಕೇಳಿದ್ದು. ನನ್ನ ಪ್ರಶ್ನೆ ಏನೆಂದರೆ, ಇಂತಹುದೇ ಪ್ರಸಂಗ ಬಂದಾಗ un-seasonal rains ಆಗಿ ಬೆಳೆ ಹಾಳಾದ ಸಂದರ್ಭದಲ್ಲಿ ನಮ್ಮ ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಇವತ್ತು

ಪರಿಹಾರ ಕೊಡುತ್ತಿದ್ದಾರೆ. ಅದೇ ಮಾದರಿಯಲ್ಲಿ ನೀವೂ ಪರಿಹಾರ ಕೊಡುತ್ತೀರಾ ಎಂಬುದೇ ನನ್ನ ಪ್ರಶ್ನೆಯಾಗಿದೆ. ಈಗ ಅದು ಬರುವುದಿಲ್ಲ, ಏಕೆ ಬರುವುದಿಲ್ಲ, ಇತ್ಯಾದಿ ನೀವೇ ಉತ್ತರಿಸಬೇಕು. ಆದರೆ, ನಾನು ಒತ್ತಾಯಿಸುತ್ತಿರುವುದೇನೆಂದರೆ, ಪಕ್ಕದ ರಾಜ್ಯದಲ್ಲಿ ಬೆಳೆ ನಷ್ಟ ಪರಿಹಾರವನ್ನು ಯಾವ ರೀತಿ ಕೊಡುತ್ತಿದ್ದಾರೋ, ಇದೇ ಶೇಂಗಾ ಬೆಳೆಗೆ ಅಲ್ಲಿ ಕೊಡುತ್ತಿದ್ದಾರೆ. ರೈತರು ತೆಗೆದುಕೊಂಡಿದ್ದಾರೆ. ಕರ್ನಾಟಕಕ್ಕೂ, ಆಂಧ್ರಪ್ರದೇಶಕ್ಕೂ 300 ಕಿಲೋಮೀಟರ್‌ಗಳಷ್ಟು ಬಾರ್ಡರ್‌ನಲ್ಲಿರುವ ಆ ಭಾಗದ ರೈತರು ತೆಗೆದುಕೊಂಡಿದ್ದು, ಈ ಭಾಗದ ರೈತರು ತೆಗೆದುಕೊಂಡಿಲ್ಲವೆಂದರೆ, ' ಇದರಿಂದ ರಾಜ್ಯಕ್ಕೆ ಅವಮಾನವಾಗುತ್ತದೆ. ಆ ಕಾರಣಕ್ಕೋಸ್ಕರ ದಯಮಾಡಿ ಅದನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲವೆಂದು ಮಾತ್ರ ದಯಮಾಡಿ ಹೇಳಬೇಡಿ. ನಿಮ್ಮ ಹಿಂದೆ ಕೆಳುತ್ತಿರುವವರಲ್ಲಿ ಒಬ್ಬರು ಅದನ್ನೂ ಬೆಳೆಯುವವರೇ. ಸುಧಾಕರ್‌ರವರೂ ಅದನ್ನು ಬೆಳೆಯುವವರೇ. ಹೀಗೆ 4–5 ಜನ ಮಂತ್ರಿಗಳಿದ್ದೀರಿ. ದಯಮಾಡಿ, ಮುಖ್ಯಮಂತ್ರಿಗಳನ್ನು convince ಮಾಡಿಕೊಡಿ. ನೀವು ಎರಡು ಸಲ ಹೇಳಿಕೆಗಳನ್ನು ದಾವಣಗೆರೆ ಮತ್ತು ತುಮಕೂರುಗಳಲ್ಲಿ ಕೊಟ್ಟಿರಿ. ಹೇಳಿಕೆ ಕೊಟ್ಟು 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅದು ಎಲ್ಲಿ ಬಿಡುಗಡೆಯಾಯಿತು? ಇದೆಲ್ಲಾ ಆದಮೇಲೆ, ಮಂತ್ರಿಗಳು ಹೇಳಿದ ಹೇಳಿಕೆಯ ಮೇಲೆ Development Commissioner ರವರು, ಇಲ್ಲ ಎಂದು ಹೇಳುತ್ತಾರೆ ಎಂದರೆ ಏನಾಗುತ್ತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ. ರೈತರ ನಾಯಕರಾದ ಉಮೇಶ್ ಕತ್ತಿಯವರು ಆಗಲೇ ಹೆಮ್ಮೆಯಿಂದ ಹೇಳಿದರು, ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕಾದಂಥ 12,500 ಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ಆ ಧೈರ್ಯ ನಿಮಗೆ ಏಕೆ ಬರಲಿಲ್ಲ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ಆಂಧ್ರಪ್ರದೇಶದಲ್ಲಿ ಕೊಟ್ಟಿರತಕ್ಕಂಥಾದ್ದು, ಹಿಂದಿನ ವರ್ಷ ಅಂದರೆ 2008ನೇ ಇಸವಿ ಫೆಬ್ರವರಿಯಲ್ಲಿ ಅತೀ ಮಳೆ ಬಂದು ಹಾಳಾಗಿರತಕ್ಕಂಥ ಬೆಳೆಗಳಿಗೆ ಕೊಟ್ಟಿದ್ದಾರೆ. ಆದರೆ ಈಗ ತಾವು ಹೇಳುತ್ತಿರುವಂಥಾದ್ದು ಆಗಸ್ಟ್ ತಿಂಗಳಲ್ಲಿ ಬಿತ್ತಿ, ನವೆಂಬರ್ ತಿಂಗಳಲ್ಲಿ ಕಟಾವು ಆಗತಕ್ಕಂಥಾದ್ದು. ಇದು natural ಆಗಿ ಬೆಳೆಯುವಂಥಾದ್ದಯ. ಬೇಸಿಗೆಯಲ್ಲಿ ಅತಿ ಹೆಚ್ಚಿನ ಮಳೆ ಅಂದರೆ ಒಂದು ದಿವಸದಲ್ಲೇ 300 ಮಿಲಿಮೀಟರ್ ಮಳೆ ಬಂದು ಹಾಳಾಗಿರ ತಕ್ಕಂಥ ಸಂದರ್ಭದಲ್ಲಿ ಆಂಧ್ರದಲ್ಲಿ ಪರಿಹಾರವನ್ನು ಕೊಟ್ಟಿದ್ದಾರೆ. ಆ ಆರ್ಡರ್ ಕಾಪಿಯಲ್ಲಿ ಏನಿದೆ ಎನ್ನುವುದನ್ನು ತಿಳಿಯಲು ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ. 300 ಕಿಲೋಮೀಟರ್ ದೂರದಲ್ಲಿರುವ ಆಂಧ್ರಪ್ರದೇಶದಲ್ಲಿ ಪರಿಹಾರವನ್ನು ಕೊಟ್ಟಿದ್ದಾರೆ ಎನ್ನುವ ಪ್ರಸ್ತಾಪವನ್ನು ಮಾನ್ಯ ಸದಸ್ಯರು ಮಾಡಿರುವುದರಿಂದ ಅವರಿಗೆ ನಾನು ಇದನ್ನು ಕಳುಹಿಸುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ನನ್ನ ಹತ್ತಿರ ಆದೇಶ ಇದೆ. ಆ ಆದೇಶವನ್ನು ನಾನೇ ತರಿಸಿ ನಿಮ್ಮ Commissioner ರವರಿಗೆ ಕೊಟ್ಟಿದ್ದೇನೆ. ನೀವು ಅಷ್ಟು ಸುಲಭವಾಗಿ ಆದೇಶವನ್ನು ಕಳುಹಿಸಿಕೊಡುತ್ತೇನೆ ಎಂದು ಹೇಳಿ ತಪ್ಪಿಸಿಕೊಳ್ಳಲಾಗುವುದಿಲ್ಲ. ನಾನು ಆಗಸ್ಟ್‌ಗೆ ಬೀಳಬೇಕೋ ಅಥವಾ ಸೆಪ್ಟೆಂಬರ್‌ಗೆ ಬೀಳಬೇಕೋ ಎಂದು ನಿಮ್ಮನ್ನು ಕೇಳಿಕೊಂಡು ಮಳೆ ಬೇಳಬೇಕಾಗಿತ್ತೇ? ಆದೇಶದಲ್ಲಿ, un-seasonal, heavy rains ಎಂದು ಹೇಳಿದ್ದಾರೆ. ಅವರು ಆ ರೀತಿಯಾಗಿ interpret ಮಾಡುತ್ತಾರೆ ಎಂದರೆ ಅದನ್ನು ಮಾಡಲು ನಿಮಗೆ ಏನು ತೊಂದರೆ?

ಶ್ರೀ ಎಸ್.ಎ.ರವೀಂದ್ರನಾಥ್ : Un-seasonal ಎಂದು ಬೇಸಿಗೆಯಲ್ಲಿ ಶೇಂಗಾ ಬಿತ್ತಿರತಕ್ಕಂಥಾದ್ದಕ್ಕೆ ಹೇಳಿದ್ದಾರೇ. ಬೇಸಿಗೆಯಲ್ಲಿ ಶೇಂಗಾ ಬಿತ್ತಿ ಆ ಬೆಳೆ ಹಾಳಾಗಿರತಕ್ಕಂಥಾದ್ದಕ್ಕೆ ಕೊಟ್ಟಿದ್ದಾರೆ. ಆದರೆ ಇಲ್ಲಿ seasonal ನಲ್ಲಿಯೇ ಬಿತ್ತಿರತಕ್ಕಂಥ ಬೆಳೆ ಹಾಳಾಗಿದ್ದರೆ, ಅದಕ್ಕೆ ಯಾರು insurance ಅನ್ನು ಮಾಡಿಸಿ, ಅದನ್ನು claim ಮಾಡಿರುತ್ತಾರೆ ಅಂಥವರಿಗೆ ನಾವು insurance ಕೊಡುವಂಥಾದ್ದನ್ನು ಮಾಡುತ್ತೇವೆ. ಒಂದು ಭಾಗದಲ್ಲಿ ಶೇಂಗಾ ಹಾಳಾಗಿರಬಹುದು, ಇನ್ನೊಂದು ಭಾಗದಲ್ಲಿ ಆಲೂಗಡ್ಡೆ ಹಾಳಾಗಿರಬಹುದು, ಮತ್ತೊಂದು ಭಾಗದಲ್ಲಿ ನೀರುಳ್ಳಿ ಹಾಳಾಗಿರಬಹುದು ಅಥವಾ ಅದು ಬಿಳಿ ಜೋಳವಿರಬಹುದು, ಹೀಗೆ ಇಡೀ ರಾಜ್ಯದಲ್ಲಿ ಒಂದೊಂದು ಕಡೆಗಳಲ್ಲಿ ಒಂದೊಂದು ಬೆಳೆ ಹಾಳಾಗಿರುತ್ತವೆ. ಅದಕ್ಕಾಗಿಯೇ ನಮ್ಮ ಸರ್ಕಾರ Insurance Policyಯನ್ನು ಮಾಡಿದೆ. insurance ಅನ್ನು ಕಟ್ಟಿರತಕ್ಕಂಥ 728 ಜನರು ಯಾರಿದ್ದಾರೆ, ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ insurance ಅನ್ನು ಕೊಡುವಾಂಥಾದ್ದನ್ನು ಸರ್ಕಾರ ಮಾಡುತ್ತದೆ. ಆದರೆ Insurance Policy ಯಲ್ಲಿ ಬರದಂಥವರಿಗೆ ಸರ್ಕಾರ ಕೊಡಲು ಕಷ್ಟವಾಗುತ್ತದೆ. ಆಂಧ್ರಪ್ರದೇಶದಲ್ಲಿ ಕೊಟ್ಟಿದ್ದಾರೆ ಎಂದು ನೀವು ಹೇಳಿದಿರಿ. ನಾನೂ ಸಹ ಅದರ ಒಂದು ಕಾಪಿಯನ್ನು ತರಿಸಿ ನೋಡಿದೆ. ಅದು ಬೇಸಿಗೆಯಲ್ಲಿ ಅಂದರೆ ಕಳೆದ ವರ್ಷದ ಫೆಬ್ರವರಿ ತಿಂಗಳಲ್ಲಿ ಕೊಟ್ಟಿರತಕ್ಕಂಥಾದ್ದು ಆಗಿದೆ. ಆದರೆ ಇಲ್ಲೂ ಸಹ ರೈತರಿಗೆ ಬಹಳ ಅನ್ಯಾಯವಾಗಿದೆ. ನಾನೂ ಸಹ ಆ ಭಾಗದಲ್ಲಿ ನೋಡಿದ್ದೇನೆ. ಆದರೂ ಸಹ ಇದನ್ನು ಮಾನವೀಯತೆಯ ದೃಷ್ಟಿಯಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದು, ಅವರಿಗೆ ಪರಿಹಾರ ಕೊಡಲಿಕ್ಕೆ ನಾನೂ ಸಹ ನಿಮ್ಮ ಪರವಾಗಿ ಸರ್ಕಾರಕ್ಕೆ ಒತ್ತಾಯ ಮಾಡಿ, ರೈತರಿಗೆ ಈ ರೀತಿ ಅನ್ಯಾಯವಾಗಿದೆ, ಇದಕ್ಕೆ ಯಾವುದೇ ರೀತಿಯಲ್ಲಾದರೂ ತುಂಬಿ ಕೊಡಬೇಕು ಎಂದು ನಾನೂ ಸಹ ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಸರ್ಕಾರ ಎಂದರೆ ಮಂತ್ರಿಗಳು ಎಂದು ನಾನು ತಿಳಿದುಕೊಂಡಿದ್ದೇನೆ. ನೀವೇ ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಹೇಳಿದರೆ ನಾವು ಇನ್ಯಾರ ಬಳಿ ಹೇಳಬೇಕು?

ಅಧ್ಯಕ್ಷರು : ಅವರು, ಮುಖ್ಯಮಂತ್ರಿಗಳು ಎನ್ನುವ ಬದಲು ಸರ್ಕಾರ ಎಂಧು ಹೇಳಿದರು.

ಶ್ರೀ ಟಿ.ಬಿ.ಜಯಚಂದ್ರ : ಆಗಲಿ. ಇವರೇ 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ದಾವಣಗೆರೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅಲ್ಲಿ ರೈತರು ಇವರಿಗೆ ಸನ್ಮಾನ ಮಾಡಿದ್ದಾರೆ. ತುಮಕೂರಿನಲ್ಲಿಯೂ ಸನ್ಮಾನ ಮಾಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಈಗ ನೀವು Seasonal, un-seasonal ಎಂದು interpretation ಮಾಡಿ, ಆ ತಿಂಗಳು, ಈ ತಿಂಗಳು ಎಂದೆಲ್ಲಾ ಹೇಳುತ್ತಿದ್ದೀರಲ್ಲ, ಇದು ಸರಿಯೇ? ನೀವು ರೈತರ ಮಕ್ಕಳು.

ಶ್ರೀ ಎಸ್.ಎ.ರವೀಂದ್ರನಾಥ್ : ನನಗೆ ಸನ್ಮಾನವನ್ನೇನೂ ಮಾಡಿಲ್ಲ.

ಶ್ರೀ ಟಿ.ಬಿ.ಜಯಚಂದ್ರ : ರೈತರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಸನ್ಮಾನ ಮಾಡಿದರು ಎಂಧರೆ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಂಥ ಮುಖ್ಯಮಂತ್ರಿಗಳು ನಮ್ಮ ಜೊತೆಗೆ ಬಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಅದರಲ್ಲಿ ಚಿತ್ರದುರ್ಗ 30 ಕೋಟಿ, ತುಮಕೂರಿಗೆ 28 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ತಾವು ಒಂದು ಸಾರಿಯಲ್ಲ, ಎರಡು ಮೂರು ಸಾರಿ ಹೇಳಿದ್ದೀರಿ. ನಿಮಗೆ ಬೇಕೆಂದರೆ ಅದರ ಮಾಹಿತಿಯನ್ನು ಈಗ ನಾನು ಕೊಡುತ್ತೇನೆ. ಈಗ ಇಲ್ಲಿಗೆ ಬಂದು, ನಾನು ಆ ರೀತಿ ಹೇಳಲಿಲ್ಲ ಎಂದು ಹೇಳಲಿಕ್ಕೆ ಶುರುಮಾಡಿಬಿಟ್ಟರೆ ಹೇಗೆ? ದಯಮಾಡಿ ರೈತರ ವಿಚಾರದಲ್ಲಿ ಇವೆಲ್ಲಾ ಹೇಳುವುದಕ್ಕೆ ಹೋಗಬೇಡಿ. ಏಕೆಂದರೆ ನೀವು ರೈತರ ನಾಯಕರು, ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿರುವವರು.

ಶ್ರೀ ಎಸ್.ಎ.ರವೀಂದ್ರನಾಥ್ : ನಾವು ರೈತರ ಪರವಾಗಿಯೇ ಮಾತನಾಡುತ್ತಿದ್ದೇವೆ. ರೈತರ ಕೆಲಸವನ್ನೇ ಮಾಡುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ನೀವು ಈ ರೀತಿ interpret ಮಾಡಿಕೊಂಡು ಹೋದರೆ ರೈತರು ಎಲ್ಲಿಗೆ ಹೋಗಬೇಕು ಹೇಳಿ? ಇವತ್ತು ಇವರೇ Deputy Commissioner ಮುಖೇನ 80% crop cutting experiment ಮಾಡಿಸಿದ್ದಾರೆ. 3–4 ತಾಲ್ಲೂಕುಗಳಲ್ಲಿ 80% loss ಆಗಿದೆ ಎಂದು ಹೇಳಿದ ಮೇಲೆ, ಈಗ insurance ಕೊಡುತ್ತೇವೆ ಎನ್ನುವುದಾದರೆ, ನೀವು ಇಲ್ಲಿಗೆ ಬಂದಿರುವುದು insurance ಬಗ್ಗೆ ಬೋಧನೆ ಮಾಡುವುದಕ್ಕೇ? ನಾವು ಹೇಳುತ್ತಿರತಕ್ಕಂಥಾದ್ದು

ಏನೆಂದರೆ, ಬೇರೆ ರಾಜ್ಯದಲ್ಲಿ ಕೊಟ್ಟಿದ್ದಾರೆ, ಅದೇ ರೀತಿ ನೀವು ಏಕೆ ಕೊಡಬಾರದು ಎಂದು ಹೇಳುತ್ತಿದ್ದೇವೆ. ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್.ಎ.ರವೀಂದ್ರನಾಥ್ : ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಪೆಕ್ಸ್ ಬ್ಯಾಂಕ್‌ಗಳ ಸಾಲಗಳ ಬಗ್ಗೆ

60(411) ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣ ಬೆಳಗೊಳ)

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತದವರು ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಲಾಗಿದೆ ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ? ಹಾಗಿದ್ದಲ್ಲಿ, ಸಾಲ ಮಂಜೂರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇದು ಈ ಕೆಳಕಂಡ ಸಹಕಾರಿ ಮತ್ತು ಸಹಕಾರೇತರ ಸಕ್ಕೆರೆ ಕಾರ್ಖಾನೆಗಳಿಗೆ ಸಾಲ ನೀಡಿರುತ್ತದೆ.

ವರ್ಷ	ಸಹಕಾರಿ ಸಕ್ಕರೆ ಕಾರ್ಖಾನೆ	ಸಹಕಾರೇತರ ಸಕ್ಕರೆ ಕಾರ್ಖಾನೆ
2005–06	1) ಕೃಷ್ಣಾ ಸ.ಸ.ಕಾ. 2) ಮಹಾತ್ಮಾಗಾಂಧಿ ಸ.ಸ.ಕಾ 3) ಘಟಪ್ರಭಾ ಸ.ಸ.ಕಾ 4) ಹಿರಣ್ಯಕೇಶಿ ಸ.ಸ.ಕಾ	1) ಮೈಸೂರ್ ಶುಗರ್ಸ 2) ಪ್ರಭುಲಿಂಗೇಶ್ವರ ಶುಗರ್ಸ್ ನಿ. 3) ಜಮಖಂಡಿ ಶುಗರ್ಸ್ ನಿ. 4) ಬೀಳಗಿ ಶುಗರ್ಸ್ ನಿ. 5) ಜೆಮ್ ಶುಗರ್ಸ್ 6) ಬಾದಾಮಿ ಶುಗರ್ಸ್ ನಿ.
2006–07	1) ಧನಲಕ್ಷ್ಮಿ ಸ.ಸ.ಕಾ.ನಿ. 2) ಸೋಮೇಶ್ವರ ಸ.ಸ.ಕಾ. 3) ಘಟಪ್ರಭಾ ಸ.ಸ.ಕಾ. 4) ಮಹಾತ್ಮಾಗಾಂಧಿ ಸ.ಸ.ಕಾ. 5) ನಾರಂಜಾ ಸ.ಸ.ಕಾ. 6) ಹಾಲುಸಿದ್ಧನಾಥ ಸ.ಸ.ಕಾ.	1) ಬೀಳಗಿ ಶುಗರ್ಸ್ ನಿ. 2) ನಿರಾಣಿ ಶುಗರ್ಸ್ ನಿ. 3) ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ನಿ. 4) ಜಮಖಂಡಿ ಶುಗರ್ಸ್ ನಿ. 5) ಬಾದಾಮಿ ಶುಗರ್ಸ್ ನಿ. 6) ಜೆಮ್ ಶುಗರ್ಸ್
2007–08	1) ಕೃಷ್ಣಾ ಸ.ಸ.ಕಾ 2) ಮಾರ್ಕಂಡೇಯ ಸ.ಸ.ಕಾ.	1) ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ನಿ. 2) ಜಮಖಂಡಿ ಶುಗರ್ಸ್ ನಿ. 3) ಬೀಳಗಿ ಶುಗರ್ಸ್ ನಿ. 4) ಜೆಮ್ ಶುಗರ್ಸ್